AS – 014

**II Semester B.A. Examination, April/May 2012**
**(Freshers Scheme) (2011 – 12)**
**ಐಚ್ಛಿಕ ಕನ್ನಡ – II**
**ಸಾಹಿತ್ಯ ಅಧ್ಯಯನ - 2**

Time : 3 Hours Max. Marks : 100

**ಕಾವ್ಯ**

I. ಅ) ಈ ಕೆಳಗಿನ ಪದ್ಯಭಾಗವನ್ನು ವಿಶ್ಲೇಷಿಸಿ. **(1×6=6)**

"ಹುಲುಮನುಸಿಯ ಪಾಡು ಹಿಂಗಯ್ತೆ, ನಮ್ಮವ್ವ,
ಮಲೆದೇವ್ರ ಪಾಡ ಏನೇಳ್ಳಿ !
ಸುಲುಭಾನೆ ಲೋಕಾದ ಸಂಸಾರ ನಡೆಸೋದು ?
ಅಳು ಬಂತು ನಮ್ಮಪ್ಪಾಗಿ"

ಆ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) 'ಹೊಲೆಯನಾರು' ಪದ್ಯದ ಸ್ವಾರಸ್ಯವನ್ನು ಕುರಿತು ಬರೆಯಿರಿ.
2) ಭಾರತ ಕಂಡ ಗಾಂಧಿಯನ್ನು ಜಿ.ಎಸ್.ಎಸ್. ಹೇಗೆ ವರ್ಣಿಸಿದ್ದಾರೆ ?
3) "ಜೋಳದ ಪಾಳಿ"ಯ ವಿಶೇಷತೆಯನ್ನು ಕಣವಿಯವರು ವ್ಯಕ್ತಪಡಿಸಿರುವ ಬಗೆ ಎಂತಹುದು ?
4) "ಇತಿಹಾಸ" ಕವಿತೆಯಲ್ಲಿ ಕವಿ ನೀಡುವ ಚೀನಾ-ಭಾರತದ ದೃಶ್ಯ ಎಂತಹುದು ?

ಇ) **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2×12=24)**

1) "ವಸಂತ" ಕವಿತೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.
2) ಕೆ.ಎಸ್. ನರಸಿಂಹಸ್ವಾಮಿಯವರು ಕಂಡ "ಗೃಹಲಕ್ಷ್ಮಿ" ಎಂತವಳು ? ವಿವರಿಸಿ.
3) "ಉಂಡುಟ್ಟವರ ನಡುವಿನ ಒಂದು ಹೆಣ್ಣು" ಕವಿತೆಯಲ್ಲಿ ಸ್ತ್ರೀ ಬದುಕಿನ ಶೋಷಣೆಯು ಹೇಗೆ ವ್ಯಕ್ತವಾಗಿದೆ ?
4) "ದೇಶಭಕ್ತ ಸೂಳೆಮಗನ ಗದ್ಯಗೀತೆ" ಯಲ್ಲಿ ಲಂಕೇಶ್ ಚಿತ್ರಿಸಿರುವ ರಾಜಕಾರಣಿಯ ಚಿತ್ರ ಹೇಗೆ ಮೂಡಿ ಬಂದಿದೆ ? ವಿವರಿಸಿ.

http://www.onlinebu.com



## ನಾಟಕ

II. ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(3×2=6)**

1) ಮಾಸ್ತಿ ವೆಂಕಟೇಶ್ ಅಯ್ಯಂಗಾರ್ 2) ಕರಿಹೈದ

3) ಕಾಕ 4) ರಣಧೀರ

ಆ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2×10=20)**

1) ಕಾಡು ಕುರುಬರ ಸಾಂಸ್ಕೃತಿಕ ಜೀವನದ ವಿವಿಧ ನೆಲೆಗಳು ''ಕಾಕನಕೋಟೆ'' ನಾಟಕದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿ.

2) ನಾಟಕದಲ್ಲಿ ಕಾಡುಕುರುಬರ ಸಂಸ್ಕೃತಿಯೊಂದು ವಿಘಟನೆಗೆ ಒಳಗಾದುದರ ಚಿತ್ರಣವನ್ನು ಕೊಡಿ.

3) ಬೂಡಿನ ಸಂಸ್ಕೃತಿ ಬದಲಾವಣೆಗೆ ಕಾಚನ ಪಾತ್ರವೇನೆಂಬುದನ್ನು ವಿಶ್ಲೇಷಿಸಿ.

4) ಕರಣೀಕ, ಮೋನಿ, ಹೆಗ್ಗಡೆ–ಇವರಲ್ಲಿ ಇಬ್ಬರ ಪಾತ್ರಪರಿಚಯ ಮಾಡಿಕೊಡಿ.

## ಹೊಸಗನ್ನಡ ಸಾಹಿತ್ಯ ಚರಿತ್ರೆ

III. ಅ) ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**

1) ಬಿ.ಎಂ.ಶ್ರೀ. 2) ಪು.ತಿ.ನ.

3) ಚಂದ್ರಶೇಖರ ಕಂಬಾರ 4) ಗೋಪಾಲಕೃಷ್ಣ ಅಡಿಗ

ಆ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) ಆತ್ಮಕತೆ ಎಂದರೇನು ? ವಿವರಿಸಿ.

2) ಸಣ್ಣ ಕತೆಯ ಲಕ್ಷಣ – ಸ್ವರೂಪವನ್ನು ಪರಿಚಯಿಸಿ.

3) ಕನ್ನಡ ಸಾಹಿತ್ಯದಲ್ಲಿ ವಿಚಾರಸಾಹಿತ್ಯದ ಮಹತ್ವವನ್ನು ತಿಳಿಸಿ.

4) ಭಾವಗೀತೆಯ ಲಕ್ಷಣಗಳನ್ನು ವಿವರಿಸಿ.

ಇ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2×10=20)**

1) ಕನ್ನಡ ಸಾಹಿತ್ಯದಲ್ಲಿ ನವೋದಯದ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.

2) ಬಂಡಾಯ – ದಲಿತ ಸಾಹಿತ್ಯದ ಪ್ರಮುಖ ಕವಿಗಳನ್ನು ಪರಿಚಯ ಮಾಡಿಕೊಡಿ.

3) ನವ್ಯ ಸಾಹಿತ್ಯದ ಧೋರಣೆಗಳನ್ನು ಕುರಿತು ಬರೆಯಿರಿ.

4) ಸ್ತ್ರೀವಾದಿ ನಿಲುವುಗಳು ಬೆಳೆದು ಬಂದ ಬಗೆಯನ್ನು ವಿವರಿಸಿ.

www.onlinebu.com

http://www.onlinebu.com http://www.onlinebu.com

http://www.onlinebu.com





# II Semester B.A. Examination, April/May 2012
## (Repeaters Scheme) (2010 – 11)
## ಕನ್ನಡ ಐಚ್ಛಿಕ - II
## ಸಾಹಿತ್ಯ ದರ್ಪಣ -೨ ಮತ್ತು ಮ್ಯಾಕ್‌ಬೆತ್
## ಕಾವ್ಯ-ನಾಟಕ-ಆಯ್ದಲೇಖನಗಳು - ಛಂದಸ್ಸು

Time : 3 Hours | Max. Marks : 90

I. ಅ) ಈ ಪದ್ಯದ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **(6×1=6)**

ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕ ಪಂಕ್ತಿ
ಲೇಖನ ರೇಖಾ ನ್ಯಾಸದಲಿ
ಅವಾಙ್ಮಯ ಛಂದಃ ಪ್ರಾಸದಲಿ
ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯೆಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು.

೧) ಆಕಾಶದಲ್ಲಿ ತೇಲುತ್ತ ಬಂದದ್ದೇನು ?
೨) ಈ ಕವಿತೆಯ ಕರ್ತೃ ಯಾರು ?
೩) ಸೃಷ್ಟಿ ರಚನೆಯಲ್ಲಿ ಕವಿಗೆ ಏನು ಕಂಡಿದೆ ?
೪) ಈ ಪದ್ಯ ಏನನ್ನು ಕುರಿತದ್ದು ?
೫) 'ತಾನಿಹೆನು' ಎಂಬುದು ಯಾವುದು ?
೬) ದೇವರಿಗೆ ರುಜುಮಾಡಲು ಸಿಕ್ಕ ನೆವವೇನು ?

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**

೧) ಎ.ಕೆ. ರಾಮಾನುಜನ್     ೨) ಮಂಗನ ಲಾಗ
೩) ಬಿ.ಎಂ.ಶ್ರೀ.     ೪) ಚನ್ನವೀರ ಕಣವಿ

ಇ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×5=10)**

೧) ದೇವರು ರುಜುಮಾಡುವ ಕಲ್ಪನೆಯ ಹಿಂದಿನ ವೈಶಿಷ್ಟ್ಯವೇನು ?
೨) ಮುಗ್ಧ ಹೆಣ್ಣೊಂದು ದೇವರ ಕಷ್ಟಕ್ಕೆ ಕರಗುವ ಬಗೆ.
೩) 'ಮೃಗಾಯಣ'-ಮೃಗಗಳ ಚರಿತ್ರೆಯೂ ಹೌದು - ಹೇಗೆ ?
೪) 'ದಿಲ್ಲಿಯ ದರ್ಬಾರು' ಕವಿತೆಯಲ್ಲಿ ಕಂಡುಬರುವ ಆಶಯಗಳೇನು ?

http://www.onlinebu.com



ಈ) ಒಂದು ಪ್ರಶ್ನೆಗೆ ಉತ್ತರಿಸಿ. **(1×10=10)**

೧) ಕಾವ್ಯ ಕಟ್ಟುವಿಕೆಯು 'ಶ್ರೀರಾಮನವಮಿಯದಿವಸ' ದಲ್ಲಿ ಹೇಗೆ ವ್ಯಕ್ತವಾಗಿದೆ ?

೨) ಅನಾಥೆಯ ಬಗ್ಗೆ 'ದುಃಖಸೇತು' ವಿನಲ್ಲಿ ಅಭಿವ್ಯಕ್ತಗೊಂಡಿರುವುದೇನು ?

೩) ನವ್ಯದ ಸಂದರ್ಭದಲ್ಲಿ ಶರ್ಮರ 'ಏಳು ಸುತ್ತಿನ ಕೋಟೆ' ಯು ಚಿತ್ರಿಸುವ ಲೈಂಗಿಕ ಪ್ರಜ್ಞೆಯ ಸ್ವರೂಪವೇನು ?

II. ಅ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×5=10)**

೧) ಅಧಿಕಾರಕ್ಕಾಗಿ ಸಂಚು 'ಮ್ಯಾಕ್‌ಬೆತ್' ನಲ್ಲಿ ಹೇಗೆ ವ್ಯಕ್ತವಾಗಿದೆ ?

೨) ಲೇಡಿ ಮ್ಯಾಕ್‌ಬೆತ್‌ಳ ನಿದ್ರಾನಡಿಗೆಯ ಸನ್ನಿವೇಶವನ್ನು ವಿವರಿಸಿ.

೩) ಡಂಕನ್ ಕೊಲೆಯಾಗುವ ಪ್ರಸಂಗವನ್ನು ವಿವರಿಸಿ.

೪) ಕಾವಲುಗಾರನ ಸ್ವಗತದ ಸನ್ನಿವೇಶವನ್ನು ತಿಳಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. **(1×10=10)**

೧) ಮಹತ್ವಾಕಾಂಕ್ಷೆಯು ಮ್ಯಾಕ್‌ಬೆತ್‌ನ ದುರಂತಕ್ಕೆ ಹೇಗೆ ಕಾರಣವಾಗುತ್ತದೆ ?

೨) ಮಾನವಾತೀತ ಶಕ್ತಿಗಳ ಕೈವಾಡವು ಮ್ಯಾಕ್‌ಬೆತ್ ನಾಟಕದಲ್ಲಿ ಹೇಗೆ ಪ್ರಸ್ತುತಗೊಂಡಿದೆ ?

III. ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×10=20)**

೧) ವಿಮರ್ಶೆಯ ಕಾರ್ಯ ಮತ್ತು ವಿಧಾನವನ್ನು ಪರಿಚಯಿಸಿ.

೨) ಉತ್ತಮ ವಿಮರ್ಶಕನ ಜವಾಬ್ದಾರಿಗಳೇನು ?

೩) ಕನ್ನಡ ಸಂಸ್ಕೃತಿ ಚಿಂತಕರ ಚಿಂತನೆಗಳನ್ನು ಸಂಗ್ರಹವಾಗಿ ವಿವರಿಸಿ.

೪) ಉತ್ಪಾದನಾ ವ್ಯವಸ್ಥೆಯ ಹಿನ್ನೆಲೆಯಲ್ಲಿ ಹುಟ್ಟಿದ ವರ್ಗ ಸಂಘರ್ಷವು ಕುವೆಂಪು ಕೃತಿಗಳಲ್ಲಿ ಹೇಗೆ ವ್ಯಕ್ತವಾಗಿದೆ ?

IV. ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

೧) ಕಂದ

೨) ಅಂಶಗಣ

೩) ತ್ರಿಪದಿ

೪) ಸರಳರಗಳೆ

ಆ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×5=10)**

೧) ಷಟ್ಪದಿಯ ಪ್ರಭೇದಗಳನ್ನು ವಿವರಿಸಿ.

೨) ಖ್ಯಾತ ಕರ್ಣಾಟಕಗಳು ಯಾವುವು ?

೩) ಸಾನೆಟ್, ಪ್ರಗಾಥ, ಸರಳರಗಳೆ, ಮುಕ್ತಛಂದಸ್ಸು; ಇವುಗಳಲ್ಲಿ ಎರಡನ್ನು ವಿವರಿಸಿ.

೪) ಮಂದಾನಿಲ, ಲಲಿತ, ಉತ್ಸಾಹರಗಳೆಗಳಲ್ಲಿ ಎರಡನ್ನು ಉದಾಹರಣೆ ಸಹಿತ ವಿವರಿಸಿ.

ಇ) ಎರಡಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸನ್ನು ಹೆಸರಿಸಿ. **(2×3=6)**

೧) ಅರಿಕಾಮಧ್ವಂಸಿನಾಗವ್ರಜಮಯಕಟಕಂ ರಾಜರಾಜ ಪ್ರತಿಷ್ಠಾ

೨) ಈಶನಿನ್ನ ಚರಣಭಜನೆ<br>ಯಾಶೆಯಿಂದ ಮಾಡುವೆನೋ<br>ದೋಷರಾಶಿಗಳನು ನಾಶಮಾಡೊಶ್ರೀಶಕೇಶವ

೩) ಕನ್ನಡ ಎನೆ ಕುಣಿದಾಡುವುದೆನ್ನೆದೆ<br>ಕನ್ನಡ ಎನೆ ಕಿವಿನಿಮಿರುವುದು.

http://www.onlinebu.com http://www.onlinebu.com

http://www.onlinebu.com



# II Semester B.A. Examination, April/May 2012
## (Repeaters Scheme) (Prior to 2010 -11)
### ಬಹುಮುಖಿ - II
### ಐಚ್ಛಿಕ ಕನ್ನಡ - II
### ಕಾವ್ಯ-ಕಥನ - ನಾಟಕ-ಭಾಷಾ ಅಧ್ಯಯನ ಸಂಸ್ಕೃತಿ ಅಧ್ಯಯನ

Time : 3 Hours Max. Marks : 90

*ಸೂಚನೆಗಳು: 1) ಐದು ಭಾಗಗಳು ಕಡ್ಡಾಯ.*

*2) ಎಲ್ಲಾ ಭಾಗಗಳಿಗೂ ಸಮಾನ ಅಂಕಗಳು.*

## ಭಾಗ – I
## ಕಾವ್ಯ

1. ಅ) ಈ ಕವಿತೆಯನ್ನು ಆಧರಿಸಿ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. **(4×2=8)**

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೋ ಅದರಿಚ್ಛೆ ಹಾದಿ
ಇದಕೋ ಹರಿದತ್ತ ಬೀದಿ
ನೆಲನೆಲದಿ ಮನೆ ಮನೆಯ ಮೇಲೆ
ಕೊಳ ಬಾವಿ ಕಂಡು ಕಾಣದೋಲೆ
ಗಿಡಗುಲ್ಮ ತೆವರು ತಿಟ್ಟು
ಎನ್ನದಿದಕೊಂದೆ ನಿಟ್ಟು

1) ಈ ಕವನವನ್ನು ರಚಿಸಿದ ಕವಿ ಯಾರು ? ಕವಿತೆಯ ಹೆಸರೇನು ?
2) ಯಾರ ನೆರಳು ಓಡುತ್ತಿದೆ ?
3) ಗರುಡ ಏನನ್ನು ಸಂಕೇತಿಸುತ್ತದೆ ?
4) ನೆರಳು ಎಲ್ಲೆಲ್ಲಿ ಹಾದು ಹೋಗುತ್ತದೆ ?
5) ಇದರಲ್ಲಿನ ಪ್ರಾಸಪದವನ್ನು ಗುರುತಿಸಿ.

ಆ) ಯಾವುದಾದರೂ ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

1) ಕಥನಕವನ 2) ಎಚ್.ಎಸ್.ಶಿವಪ್ರಕಾಶ್
3) ಮಾವುತ್ತೆತ್ತುಂಗ 4) ಗುಲಾಬಿ

ಇ) ಒಂದು ಪ್ರಶ್ನೆಗೆ ಸಂಗ್ರಹವಾಗಿ ಉತ್ತರಿಸಿ. **(1×3=3)**

1) 'ನಾವು ಹುಡುಗಿಯರೇ ಹೀಗೆ' ಕವಿತೆಯಲ್ಲಿ ಹೆಣ್ಣೊಬ್ಬಳ ಖಾಸಗಿ ವ್ಯಕ್ತಿತ್ವ ಹೇಗೆ ನಿರೂಪಿತವಾಗಿದೆ ?
2) 'ಪ್ರೇಮದ ಗುಲಾಬಿ' ಪದ್ಯದಲ್ಲಿ ಬದುಕನು ನೋಡುವ ಕ್ರಮ ಹೇಗೆ ಕಾಣಿಸಿಕೊಂಡಿದೆ ?

http://www.onlinebu.com



ಈ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. (1×3=3)

1) 'ಯೋಧ ಮತ್ತು ಹೆಂಗಸು' ಕವನದ ಸ್ವಾರಸ್ಯವನ್ನು ವಿವರಿಸಿ.

2) 'ಮುಂಬೈಜಾತಕ'ದಲ್ಲಿ ಚಿತ್ರಿತವಾಗಿರುವ ನಗರ ಜೀವನದ ಗೊಂದಲವನ್ನು ಪರಿಚಯಿಸಿ.

## ಭಾಗ – II

## ಕಥನ

2. ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2×2=4)

1) ಮೃಗರಾಜನನ್ನು ಎದುರಿಸಿದ ಮೊಲದ ಧೈರ್ಯವನ್ನು ವಿವರಿಸಿ.

2) ಬಸ್‌ಸ್ಟಾಂಡಿನಲ್ಲಿ ವಾಸುವಿಗೆ ಬಿದ್ದ ಕನಸು ಹೇಗಿತ್ತು ?

3) 'ಫೀನಿಕ್ಸ್' ಕಥೆಯ ನಾಯಕನಿಗೆ ಮೊದಲ ಹೆಣ್ಣನ್ನು ಕಂಡಾಗ ಮನಸ್ಸಿನಲ್ಲಿ ಮೂಡಿದ ಭಾವನೆಗಳೇನು ?

4) 'ಗಾಂಧಿ' ಹೆಸರು ಹುಡುಗನನ್ನು ಎಂಥ ಫಜೀತಿಗೆ ದೂಡಿತು ? ತಿಳಿಯಪಡಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. (1×4=4)

1) ಕೆಟ್ಟ ಗಂಡನಾಗಿರುವವನು ಸಮಾಜದಲ್ಲಿ ಒಳ್ಳೆಯವನಾಗಿರುವುದು ಸಾಧ್ಯವೆ ? 'ಬಿಡುಗಡೆ' ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

2) 'ನರಬಲಿ' ಕಥೆಯಲ್ಲಿ ಪ್ರಕಟವಾಗುವ ಸ್ತ್ರೀ ವ್ಯಕ್ತಿತ್ವ ಎಂಥದ್ದು ?

ಇ) ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. (1×10=10)

1) 'ಫೀನಿಕ್ಸ್' ಕಥೆಯಲ್ಲಿ ಗಂಡು – ಹೆಣ್ಣಿನ ಸಂಬಂಧಗಳು ಹೇಗೆ ನಿರೂಪಿತವಾಗಿದೆ ? ವಿಶ್ಲೇಷಿಸಿ.

2) ದುರ್ಗುಣಗಳೇ ದುರ್ಬಲತೆಗೆ ಕಾರಣವಾಗುತ್ತದೆ ಎಂಬುದನ್ನು 'ಮೊಲಂ ಸಿಂಹಮಂ ಕೊಂದ ಕಥೆ'ಯ ಆಧಾರದಿಂದ ಚರ್ಚಿಸಿ.

## ಭಾಗ – III

## ನಾಟಕ

3. ಅ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2×2=4)

1) ಜಲಗಾರನ ಪೂಜೆಯ ಪರಿಕರಗಳಾವುವು ?

2) ಸಂಗೀತದ ಬಗೆಗೆ ಪಾರ್ವರ ಅಭಿಪ್ರಾಯವೇನು ?

3) ಜಲಗಾರ ನಾಟಕದ ಪ್ರಮುಖ ಪಾತ್ರಗಳನ್ನು ಹೆಸರಿಸಿ.

4) 'ಲೋಕ ನಗಬೇಕಾದರೆ ಧಾರಾಳಬೇಕು' ಎಂದು ಜಲಗಾರ ಹೇಳಲು ಕಾರಣವೇನು ?

http://www.onlinebu.com http://www.onlinebu.com

ಆ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. **(1×4=4)**

1) ಶಿವನು ಜಲಗಾರನ ಭಕ್ತಿಯನ್ನು ಹೇಗೆ ವರ್ಣಿಸುತ್ತಾನೆ ?

2) ಮೊದಲನೆಯ ತರುಣನ ಪ್ರಕಾರ ಭಾರತಾಂಬೆಯ ದುರ್ಗತಿಗೆ ಕಾರಣವೇನು ?

ಇ) **ಒಂದು** ಪ್ರಶ್ನೆಗೆ ಉತ್ತರಿಸಿ. **(1×10=10)**

1) ಕಾಯಕವೇ ದೇವರೆನ್ನುವ ಜಲಗಾರನ ನಂಬಿಕೆಯನ್ನು ವಿಶ್ಲೇಷಿಸಿ.

2) ಜಲಗಾರ ನಾಟಕದಲ್ಲಿ ಬರುವ ಹಾಡುಗಳ ಮಹತ್ವವನ್ನು ಕುರಿತು ಬರೆಯಿರಿ.

## ಭಾಗ – IV

## ಭಾಷಾ ಅಧ್ಯಯನ

4\. ಅ) ಅಟಿವು ಕುಳವಾಗುವ ನಾಲ್ಕು ಪದಗಳನ್ನು ಬರೆಯಿರಿ. **(½×4=2)**

ಆ) ವಿಜಾತೀಯ ಸಂಯುಕ್ತಾಕ್ಷರಗಳು ಸಜಾತೀಯ ಸಂಯುಕ್ತಾಕ್ಷರಗಳಾಗುವ ನಾಲ್ಕು ಪದಗಳನ್ನು ಬರೆಯಿರಿ. **(½×4=2)**

ಇ) ಸ್ವರಭಕ್ತಿ ಎಂದರೇನು ? ಉದಾಹರಣೆಸಹಿತ ಬರೆಯಿರಿ. **(1×3=3)**

ಈ) **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(2×2=4)**

1) ಸಂಕುಚಿತಾರ್ಥ ಎಂದರೇನು ?

2) ಹೀನಾರ್ಥ ಪಡೆದ ಎರಡು ಪದಗಳನ್ನು ಬರೆಯಿರಿ.

3) ಬ್ರಹ್ಮ, ರತ್ನ – ಇವುಗಳ ಮೂಲಪದವನ್ನು ಬರೆಯಿರಿ.

4) ಕನ್ನಡದ ಪ್ರಮುಖ ಅವಸ್ಥಾಂತರಗಳನ್ನು ಹೆಸರಿಸಿ.

ಉ) ಪ್ರಾಂತ್ಯಭೇದಗಳಿಂದಾಗಿ ಇಂಗ್ಲೀಷ್ ಪದಗಳು ಉಚ್ಚಾರಣೆ ಹಾಗೂ ಬರಹದ ರೂಪಗಳಲ್ಲಿ ಬೇರೆ ಬೇರೆಯಾಗಿ ಕಾಣಲು ಕಾರಣವೇನು ? **(1×3=3)**

ಊ) ಬರಹದ ಭಾಷೆ ಮತ್ತು ಆಡುಭಾಷೆಯಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಗುರುತಿಸಿ. **(1×4=4)**

**ಅಥವಾ**

ಪ್ರಾಚೀನ ವ್ಯಾಕರಣಕಾರರು ತತ್ಸಮ – ತದ್ಭವಗಳ ಬಗೆಗೆ ತಳೆದ ನಿಲುವುಗಳೇನು ?

http://www.onlinebu.com



## ಭಾಗ – V

## ಸಂಸ್ಕೃತಿ ಅಧ್ಯಯನ

5\. ಅ) ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×1=2)**

1) 'ದಿ ಮೈಸೂರು ಕ್ಯಾಸ್ಟ್ ಅಂಡ್ ಟ್ರೈಬ್ಸ್' ಕೃತಿ ಬರೆದವರು ಯಾರು ?
2) ನೀಲಯ್ಯನ ಹೆಂಡತಿಯ ಹೆಸರೇನು ?
3) 'ಬುಡಕಟ್ಟು' ಇದರ ಪರ್ಯಾಯ ನಾಮಗಳನ್ನು ಹೆಸರಿಸಿ.
4) 'ಬಿಲ್ಲರು' ಎಂಬ ಪದ ಯಾವುದರಿಂದ ಬಂದಿದೆ ?

ಆ) ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(2×4=8)**

1) ಸೋಲಿಗರ ಧಾರ್ಮಿಕ ನಂಬಿಕೆಯನ್ನು ತಿಳಿಸಿ.
2) ಬುಡಕಟ್ಟು ಜನಾಂಗದ ಸಂಘಟಿತ ಬದುಕನ್ನು ಪರಿಚಯಿಸಿ.
3) ಕುಡಿಯರು ತಮ್ಮ ಸ್ವಾಭಿಮಾನವನ್ನು ಕಾಯ್ದುಕೊಂಡದ್ದು ಹೇಗೆ ?
4) ನಾಗ ಜನರ ಬದುಕಿನ ಸ್ವರೂಪವನ್ನು ವಿವರಿಸಿ.

ಇ) **ಎರಡು** ಪ್ರಶ್ನೆಗಳಿಗೆ ಉತ್ತರಿಸಿ. **(2×1=2)**

1) ಸೋಲಿಗ ಎಂಬುದು ಯಾವ ಶಬ್ದದಿಂದ ಬಂದಿದೆ ?
2) ತೊದವರು ಎಲ್ಲಿ ವಾಸಿಸುತ್ತಾರೆ ?
3) 'ಕುಡಿಯರ ಕೂಸು' ಯಾರ ಕಾದಂಬರಿ ?

ಈ) **ಒಂದು** ಪ್ರಶ್ನೆಗೆ ಉತ್ತರಿಸಿ. **(1×6=6)**

1) ಬುಡಕಟ್ಟು ಪದದ ಅರ್ಥ ವಿಸ್ತಾರವನ್ನು ಚರ್ಚಿಸಿ.
2) ಕರ್ನಾಟಕದ ಬುಡಕಟ್ಟು ಜನಾಂಗವನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

---

http://www.onlinebu.com http://www.onlinebu.com